"ಮತ್ತೆ ಮೊಹಿಯುದ್ದೀನ್ ಎಲ್ಲಿ ಹೋದ?"

"ಅವನು ರಾಜ್ಯ ಮಟ್ಟದ ಕಂಟ್ರಾಕ್ಟರ್ ಸರ್. ಸೇತುವೆ ಆದ ಮೇಲೆ ಇಲ್ಯಾಕೆ ಇರ್ತಾನೆ? ಅವನ ಊರಾದ ಉಪ್ಪಳಕ್ಕೆ ಹೋಗಿದ್ದಾನೆ. ಎರಡೂ ಊರುಗಳ ನಡುವೆ ಸೇತುವೆ ಕಟ್ಟಿ ಮತ್ತೆಂದೂ ಗಲಾಟೆಯಾಗದಂತೆ ನೋಡಿಕೊಂಡ ಮಹಾವ್ಯಕ್ತಿ ಎಂದು ಎರಡೂ ಊರುಗಳ ಜನ ಅವನನ್ನು ಸಾರ್ವಜನಿಕವಾಗಿ ಸನ್ಮಾನಿಸಿದರು ಸರ್. ಅವನ ಸನ್ಮಾನಕ್ಕೆ ಸ್ವಯಂ ಚಂದ್ರಗಿರಿ ದೊಡ್ಡ ಸ್ವಾಮೀಜಿಗಳೇ ಬಂದಿದ್ರು. ಕುತಂತ್ರಿ ಎಂ.ಎಲ್.ಎ ಮುಖ್ಯ ಅತಿಥಿಯಾಗಿದ್ದ. ಅದೆಲ್ಲಾ ಸರಿ. ಈ ವಿಷಯವೆಲ್ಲಾ ನಿಮಗೆ ಯಾಕೆ? ಇಷ್ಟಕ್ಕೂ ನೀವು ಯಾರು?"

"ನಾನೊಬ್ಬ ಹವ್ಯಾಸಿ ಬರಹಗಾರ. ಕತೆ ಬರೆಯಲು ಹೊಸ ವಸ್ತುವಿಗೆ ಹುಡುಕಾಡುವುದು ನನ್ನ ಹವ್ಯಾಸ. ನಿಮ್ಮಿಂದ ತುಂಬಾ ಉಪಕಾರವಾಯಿತು."

"ನೀವು ಕತೆ ಬರೆಯುವುದಾದರೆ ಹೇಳಿದವರು ಚಂದ್ರಮೋಹನ್ ಎಂದು ಹಾಕಿಬಿಡಿ."

"ಇಷ್ಟು ಉಪಕಾರ ಮಾಡಿದ ನಿಮ್ಮ ಹೆಸರನ್ನು ಹಾಕದಿರುತ್ತೇನೆಯೇ? ನನ್ನ ಕತೆಗಳು ಹೆಚ್ಚಾಗಿ ಅಚ್ಚಾಗುವುದು ಸುಧಾ ಮತ್ತು ಮಯೂರಗಳಲ್ಲಿ."

"ಸರಿ. ಇನ್ನು ಮುಂದೆ ಅವೆರಡನ್ನೂ ಮನೆಗೆ ತರಿಸುತ್ತೇನೆ."

★★★

ಉಪ್ಪಳದ ಮೊಹಿಯುದ್ದೀನ್ ಆಫೀಸಿನಲ್ಲಿ ಅವನನ್ನು ಮತ್ತು ಕಂಪ್ಯೂಟರ್ ಹುಡುಗಿಯನ್ನು ಬಿಟ್ಟರೆ ಬೇರಾರೂ ಇಲ್ಲದಿದ್ದುದರಿಂದ ಮಾತಾಡಲು ಬೇಕಾದಷ್ಟು ಅವಕಾಶ ಸಿಕ್ಕಿತು.

"ನೀವು ಕಟ್ಟಿದ ಸೇತುವೆ ನೋಡಿ ಇಲ್ಲಿಗೆ ಬಂದೆ. ಅಲ್ಲಿ ಎರಡೂರು ಸುಟ್ಟಿದ್ದು, ಮಾನಭಂಗವಾದ ಒಬ್ಬಳು ಕಾಣೆಯಾದ ಕತೆ ಗೊತ್ತಾಯಿತು. ನಾನೊಬ್ಬ ಪತ್ರಕರ್ತ. ಕತೆ ಬರೆಯಲು ಹೊಸ ವಸ್ತು ಹುಡುಕಿಕೊಂಡು ಕುತೂಹಲದಿಂದ ಅಲ್ಲಿಗೆ ಹೋಗಿದ್ದೆ. ಕತೆಗೊಂದು ಮುಕ್ತಾಯ ಸಿಕ್ಕೀತೇ ಎಂದು ನಿಮ್ಮಲ್ಲಿಗೆ ಬಂದೆ."

"ಸೇತುವೆ ಕಟ್ಟಿದಲ್ಲಿಗೆ ಕತೆ ಮುಕ್ತಾಯವಾಯಿತು ಮಿ?..."

"ರಾವ್, ಸದಾಶಿವ ರಾವ್."

"ಅಷ್ಟೇ ಕತೆ. ಮುಂದೇನೂ ಇಲ್ಲ. ನೀವು ಹೋಗಬಹುದು."

"ಆ ಘಟನೆಯಲ್ಲಿ ನನ್ನ ದೂರದ ಸಂಬಂಧಿಕರೊಬ್ಬರ ಮನೆ ಸುಟ್ಟುಹೋಯಿತು. ಅವರ ಹೆಂಡತಿ ಕಾಣೆಯಾದಳು. ಅವರಿಬ್ಬರನ್ನು ಹುಡುಕುತ್ತಾ ಬಂದವನು ನಾನು. ನಿಮಗೇನಾದರೂ ಗೊತ್ತಿದ್ದರೆ ಹೇಳಿ. ಕತೆಗೂ ಒಳ್ಳೆಯ ವಸ್ತು."

ಅವನ ಮಾತು ಕೇಳಿ ಅದುವರೆಗೆ ಕಂಪ್ಯೂಟರ್‌ನಲ್ಲಿ ಬಿಸಿಯಾಗಿದ್ದ ಹುಡುಗಿ ತಲೆ ಎತ್ತಿ ಸದಾಶಿವ ರಾವ್‌ನನ್ನು ನೋಡಿದಳು. ಅವನು ಅವಳನ್ನು ದಿಟ್ಟಿಸಿ ನೋಡಿ, "ಮೊಹಿಯುದ್ದೀನ್, ನೀವು ಮದುವೆಯಾದದ್ದು ಎಲ್ಲಿಯವರನ್ನು?" ಎಂದು ಕೇಳಿದ.

ಮೊಹಿಯುದ್ದೀನ್‌ಗೆ ಕಿರಿಕಿರಿಯಾಯಿತು. "ಅದೆಲ್ಲಾ ಹಳೆ ಕತೆ. ಇಲ್ಲಿದ್ದಾಳಲ್ಲಾ ಈ ಹುಡುಗಿ? ನನ್ನ ಒಬ್ಬಳೇ ಮಗಳು. ಮದುವೆಯಾಗಿ ಗಂಡ ದುಬಾಯಿಯಲ್ಲಿದ್ದಾನೆ. ಇವಳಿಗೂ ನಾನು ಆ ಕತೆ ಹೇಳಿಲ್ಲ. ಇನ್ನು ನಿಮಗೆ ಹೇಳಿ ನೀವು ಕತೆ ಬರೆದು ಊರಿಡೀ ಟಾಂ ಟಾಂ ಆಗುವುದು ನನಗಿಷ್ಟವಿಲ್ಲ."

"ಇಲ್ಲ ಮೊಹಿಯುದ್ದೀನ್. ನಾನು ಕತೆ ಬರೆಯಲ್ಲ. ಪ್ರಾಮಿಸ್. ಕೇವಲ ಕುತೂಹಲಕ್ಕಾಗಿ ಕೇಳುತ್ತಿದ್ದೇನೆ. ಮಾನವರ ನಿಜವಾದ ಸ್ವಭಾವ ಗೊತ್ತಾಗುವುದು ಸಂದಿಗ್ಧ ಕಾಲದಲ್ಲೇ ಅಲ್ಲವೇ? ಊರುಗಳಿಗೆ ಸೇತುವೆ ಕಟ್ಟಿದವರು ನೀವು. ನಿಮಗೇ ಮಾತು ಅರ್ಥವಾಗುತ್ತದೆ."

"ಆಯಿತು. ಹೇಳಿಬಿಡುತ್ತೇನೆ. ಮಗಳೇ ದಿಲ್‌ಷಾದ್ ನೀನೂ ಕೇಳಿಸಿಕೋ. ಅಂದು ಎರಡೂ